# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **533** |
| ಸದಸ್ಯರ ಹೆಸರು | : | ಡಾ. ಎಂ.ಜಿ ಮುಳೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 30-01-2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೀದರ್ ಜಿಲ್ಲೆಯಲ್ಲಿ 2024-25ನೇ ಸಾಲಿನಲ್ಲಿ "ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ"ಯಡಿ ಎಷ್ಟು ರೈತರು ನೋಂದಾಯಿಸಿ ಕೊಂಡಿದ್ದಾರೆ;</td><td>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (KRS PMFBY) ಯೋಜನೆಯಡಿ ಬೀದರ್ ಜಿಲ್ಲೆಯಲ್ಲಿ 2024-25ನೇ ಸಾಲಿನಲ್ಲಿ ಒಟ್ಟು 198755 ರೈತರು 117597.38 ಹೆಕ್ಟೇರ್ ವಿಸ್ತೀರ್ಣದಲ್ಲಿ ಬೆಳೆ ವಿಮೆಯಡಿ ನೋಂದಾಯಿಸಿಕೊಂಡಿರುತ್ತಾರೆ.<br><br>ಹಂಗಾಮುವಾರು ವಿವರ ಈ ಕೆಳಕಂಡಂತಿರುತ್ತದೆ.<br><br>
<table>
<tr><th>ಹಂಗಾಮು</th><th>ನೋಂದಾಯಿಸಿದ ರೈತ ಪ್ರಸ್ತಾವನೆಗಳ ಸಂಖ್ಯೆ</th></tr>
<tr><td>ಮುಂಗಾರು</td><td>195803</td></tr>
<tr><td>ಹಿಂಗಾರು ಹಾಗೂ ಬೇಸಿಗೆ</td><td>2952</td></tr>
<tr><td>ಒಟ್ಟು</td><td>198755</td></tr>
</table></td></tr>
<tr><td>ಆ)</td><td>ಕಳೆದ ಸಾಲಿನಲ್ಲಿ ಅತಿವೃಷ್ಟಿ ಅಥವಾ ಅನಾವೃಷ್ಟಿಯಿಂದ ಬೆಳೆ ಹಾನಿಗೊಳಗಾದ ಎಷ್ಟು ರೈತರಿಗೆ ಇನ್ನೂ ವಿಮಾ ಮೊತ್ತ ಪಾವತಿಯಾಗಿಲ್ಲ; ವಿಳಂಬಕ್ಕೆ ಕಾರಣವೇನು;</td><td>ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ (KRS-PMFBY) ಯೋಜನೆಯಡಿ 2024-25ನೇ ಸಾಲಿನಲ್ಲಿ ಬೀದರ್ ಜಿಲ್ಲೆಯಲ್ಲಿ ಇಲ್ಲಿಯವರೆಗೆ ಲೆಕ್ಕಾಚಾರ ಮಾಡಲಾದ ಮತ್ತು ಇತ್ಯರ್ಥಪಡಿಸಲು ಬಾಕಿ ಇರುವ ಬೆಳೆ ವಿಮಾ ಪರಿಹಾರದ ವಿವರ ಈ ಕೆಳಕಂಡಂತಿದೆ.<br><br>(ಮೊತ್ತ ರೂ ಲಕ್ಷಗಳಲ್ಲಿ)<br><br>
<table>
<tr><th rowspan="2">ಹಂಗಾಮು</th><th colspan="2">ಲೆಕ್ಕಾಚಾರ ಮಾಡಲಾದ ಬೆಳೆ ವಿಮೆ ಪರಿಹಾರ</th><th colspan="2">ಇತ್ಯರ್ಥಪಡಿಸಲು ಬಾಕಿ ಇರುವ ಬೆಳೆ ವಿಮೆ ಪರಿಹಾರ</th></tr>
<tr><th>ಪ್ರಸ್ತಾವನೆಗಳ ಸಂಖ್ಯೆ</th><th>ಮೊತ್ತ</th><th>ಪ್ರಸ್ತಾವನೆಗಳ ಸಂಖ್ಯೆ</th><th>ಮೊತ್ತ</th></tr>
<tr><td>ಮುಂಗಾರು</td><td>20241</td><td>1322.61</td><td>41</td><td>1.35</td></tr>
<tr><td>ಹಿಂಗಾರು ಹಾಗೂ ಬೇಸಿಗೆ</td><td>2076</td><td>242.14</td><td>4</td><td>0.29</td></tr>
<tr><td>ಒಟ್ಟು</td><td>22317</td><td>1564.75</td><td>45</td><td>1.64</td></tr>
</table></td></tr>
</table>

| | | |
|---|---|---|
| | | ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯಡಿ ನೊಂದಾಯಿಸಿರುವ ಅರ್ಹ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವನ್ನು ಅನುಷ್ಠಾನ ವಿಮಾ ಸಂಸ್ಥೆಗಳ ಮೂಲಕ ಆಧಾರ್ ಜೋಡಿತ ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗುತ್ತಿದೆ.<br>ಸದರಿ ಪ್ರಕ್ರಿಯೆಯಲ್ಲಿ NPCI Seeding Failure, Inactive Aadhar, Invalid Account, Aadhar not mapped to account number ಮತ್ತು Account reached maximum credit limit set on account ಆದ ಕಾರಣಗಳಿಂದಾಗಿ ರೈತರಿಗೆ ಬೆಳೆ ವಿಮೆ ಪರಿಹಾರ ಮೊತ್ತವು ರೈತರ ಬ್ಯಾಂಕ್ ಖಾತೆಗೆ ಜಮೆಯಾಗದೆ failed ಆಗಿರುತ್ತದೆ. |
| ಇ) | ಜಿಲ್ಲೆಯಲ್ಲಿ ಒಣ ಬೇಸಾಯ ಮಾಡುವ ರೈತರಿಗೆ ಸರ್ಕಾರದಿಂದ ಘೋಷಿಸಲಾದ ಬರ ಪರಿಹಾರದ ಮೊತ್ತವು ಪೂರ್ಣ ಪ್ರಮಾಣದಲ್ಲಿ ವಿತರಣೆಯಾಗಿದೆಯೇ? | 2024-25ನೇ ಸಾಲಿನಲ್ಲಿ ವಾಡಿಕೆಯಂತೆ ಮಳೆಯಾಗಿದ್ದು, ಸರ್ಕಾರದಿಂದ ಬರಪೀಡಿತ ಜಿಲ್ಲೆಯೆಂದು ಘೋಷಣೆ ಮಾಡಿರುವುದಿಲ್ಲ. ಸದರಿ ಸಾಲಿನಲ್ಲಿ ಮಳೆಯಿಂದಾಗಿ ಆಗಿದ್ದ ಬೆಳೆಹಾನಿಗೆ ಪಾವತಿಸಿರುವ ಪರಿಹಾರದ ವಿವರಗಳನ್ನು ಅನುಬಂಧದಲ್ಲಿ ಒದಗಿಸಿದೆ. |

*ಕಡತ:ಕೃಇ 29 ಎಎಂಎಸ್ 2026*

(ಎನ್.ಚಲುವರಾಯಸ್ವಾಮಿ)
ಕೃಷಿ ಸಚಿವರು

# ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂ:462 ಕ್ಕೆ ಅನುಬಂಧ

**2024-25 ನೇ ಸಾಲಿನ ಪೂರ್ವ ಮುಂಗಾರು ಅವಧಿಯಲ್ಲಿ ಪಾವತಿಸಿರುವ ಬೆಳೆಹಾನಿ ಪರಿಹಾರ**

| ಕ್ರ.ಸಂ. | ಜಿಲ್ಲೆ | ಪರಿಹಾರ ಪಾವತಿಸಿರುವ ರೈತರ ಸಂಖ್ಯೆ | ಪಾವತಿಸಿರುವ ಪರಿಹಾರ ರೂ.ಲಕ್ಷಗಳಲ್ಲಿ |
|---|---|---|---|
| 1 | ಬೀದರ್ | 56 | 5.71 |

**2024ರ ಮುಂಗಾರು ಅವಧಿಯಲ್ಲಿ ಪಾವತಿಸಿರುವ ಬೆಳೆಹಾನಿ ಪರಿಹಾರ**

| ಕ್ರ.ಸಂ. | ಜಿಲ್ಲೆ | ಪರಿಹಾರ ಪಾವತಿಸಿರುವ ರೈತರ ಸಂಖ್ಯೆ | ಪಾವತಿಸಿರುವ ಪರಿಹಾರ ರೂ.ಲಕ್ಷಗಳಲ್ಲಿ |
|---|---|---|---|
| 1 | ಬೀದರ್ | 15810 | 667.8 |

ಆಯುಕ್ತರು,
ಕೆಎಸ್‌ಡಿಎಂಎ & ಡಿಎಸ್‌ಎಸ್‌ಪಿ
ಕಂದಾಯ ಇಲಾಖೆ.